<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ. **430/2018**</u>

ಚಾಸಾ-17 ಫ್ರಾಸಾ-08

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 22.03.2025

| | | |
|---|---|---|
| ಹೆಸರು | : | ಕೃಷ್ಣಕುಮಾರ |
| ತಂದೆಯ ಹೆಸರು | : | ಅಂಬೋಜಿರಾವ |
| ವಯಸ್ಸು | : | 42 ವರ್ಷ |
| ಉದ್ಯೋಗ | : | CPI ಮಂಠಾಳ ವೃತ್ತ |
| ವಾಸಸ್ಥಳ | : | ಬಸವಕಲ್ಯಾಣ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

ದಿಃ 08.08.2016 ರಿಂದ 21.10.2018 ರ ವರೆಗೆ ದೇವಲ ಗಾಣಗಾಪೂರ ಪೋಲಿಸ ಠಾಣೆಯಲ್ಲಿ PSI ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 24.02.2018 ರಂದು ರಾತ್ರಿ 09.30 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ಹೇಳಿಕೇ ದೂರು ನೀಡಿದ್ದು, ಅದರ ಸಾರಾಂಶ ಆಧರಿಸಿ ಠಾಣಾ ಗುನ್ನೆ ನಂ.22/2018 ದಾಖಲಿಸಿಕೊಂಡು ದಿಃ 25.02.2018 ರಂದು ಸರಕಾರಿ ಆಸ್ಪತ್ರೆ ಗೊಬ್ಬರ ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದು, ಅದೇ ದಿನ ಬೆಳಗ್ಗೆ 10.00 ರಿಂದ 11.00 ರಿಂದ ಚಾಸಾ-2 ಮತ್ತು 3 ರವರ ಸಮಕ್ಷಮ ಶವ ಪಂಚನಾಮೆಯನ್ನು ಮಾಡಿರುತ್ತೇನೆ. ಅದೇ ದಿನ ಮಧ್ಯಾಹ್ನ 02.00 ರಿಂದ 03.00 ಗಂಟೆ ವರೆಗೆ ಗುನ್ನೆ ಪಂಚನಾಮೆ ಮಾಡಿ ಬಸ್ಸ ಮತ್ತು ದ್ವಿ-ಚಕ್ರ ವಾಹನವನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ.

ಅದೇ ದಿನ ಚಾಸಾ-4 ರಿಂದ 10 ರವರ ಹೇಳಿಕೆ ಮತ್ತು ಸಾಕ್ಷಿ ಬಾಂಡಗಳನ್ನು ಪಡೆದುಕೊಂಡಿರುತ್ತೇನೆ. ದಿಃ 26.06.2018 ರಂದು ಮುಂದಿನ ತನಿಖೇಗಾಗಿ ಚಾಸಾ-18 ರವರಿಗೆ ಕಡತಗಳನ್ನು ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**11** ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**11(ಬಿ)** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಪ್ರ.ವ.ವ. ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**14** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**14(ಎ)** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಶವ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**2** ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**2(ಸಿ)** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಗುನ್ನೆ ಸ್ಥಳದ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**1** ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**1(ಸಿ)** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಜಪ್ತಿ ಪಡಿಸಿಕೊಂಡೆ ಎಂದು ಹೇಳುವ ಬಸ್ಸ ಮತ್ತು ದ್ವಿಚಕ್ರ ವಾಹನದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-**3** ರಿಂದು ನಿಪಿ-**10** ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ASK ರವರ ಪರವಾಗಿ Sri.ASJ ವಕೀಲರಿಂದಃ-**

ದಿಃ 24.02.2018 ರಂದು ಚಾಸಾ-1 ರವರು ಹೇಳಿಕೆ ದೂರು ನೀಡಿದ್ದು, ಅದರ ಸಾರಾಂಶ ಆಧರಿಸಿ ಠಾಣಾ ಗುನ್ನೆ ನಂ.22/2018 ದಾಖಲಿಸಿಕೊಂಡಿರುತ್ತೇನ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಸುನೀಲಕುಮಾರ ಶವ ಪಂಚನಾಮೆಯನ್ನು ಗೊಬ್ಬರ ಸರಕಾರಿ ಆಸ್ಪತ್ರೆಯಲ್ಲಿ ಮುಂಜಾನೆ 10.00 ರಿಂದ 11.00 ರ ವರೆಗೆ ಮಾಡಿಲಾಗಿದೆ.

ದಿಃ 25.02.2018 ಶವ ಪಂಚನಾಮೆಯನ್ನು ಮಾಡಿ ಮತ್ತು ಚಾಸಾ-1 ರವರ ಮರು ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನೆ ಸ್ಥಳಕ್ಕೆ ನಾವು ಹೋದಾಗ ಮಧ್ಯಾಹ್ನ 01.00 ಗಂಟೆ ಆಗಿತ್ತು. ಅಪಘಾತವು ಚೌಡಾಪುರದ ದತ್ತ ಪೆಟ್ರೋಲ್ ಪಂಪ್ ಹತ್ತಿರ ಆಗಿರುತ್ತದೆ. ಬಸ್ಸ ಅಫಜಲಪುರ ದಿಂದ ಕಲಬುರಗಿಗೆ ಹೋಗಬೇಕಾಗಿತ್ತು, ಮೃತ ಸುನಿಲ ಚೌಡಾಪೂರ ಕಡೆಯಿಂದ ದನ್ನೂರ ಗ್ರಾಮಕ್ಕೆ ಹೊರಟಿದನು. ಚೌಡಾಪೂರ ದಿಂದ ದನ್ನೂರ ಕ್ಕೆ ಹೋಗಲು ಬೇರೆ ಮಾರ್ಗ ಇದೆ ಎಂದರೆ ನನಗೆ ಗೊತ್ತಿಲ್ಲ. ಬಸ್ಸ ಅಫಜಲಪುರ ದಿಂದ ಕಲಬುರಗಿಗೆ ಹೊರಟಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನೆ ಸ್ಥಳದ ಚೆಕ್ ಬಂದಿ ಪೂರ್ವ-ದತ್ತ ಪೆಟ್ರೋಲ್ ಪಂಪ್, ಪಶ್ಚಿಮ- ಅಫಜಲಪೂರ ರಸ್ತೆ, ಉತ್ತರ-ಸ್ಟೇಷನ ಗಾಣಗಾಪೂರಕ್ಕೆ ಹೋಗುವ ರಸ್ತೆ, ದಕ್ಷಿಣ- ಚೌಡಾಪೂರಕ್ಕೆ ಹೋಗುವ ರಸ್ತೆ ಇರುತ್ತದೆ.

ಅಪಘಾತದ ಸ್ಥಳದಲ್ಲಿ ಮೃತ ವ್ಯಕ್ತಿಯ ರಕ್ತಸ್ರಾವವಾದ ಸ್ಥಳದ ಭಾವಚಿತ್ರಗಳನ್ನು ತೆಗೆದಿಲ್ಲಾ. ಅಪಘಾತದ ಸ್ಥಳದಲ್ಲಿ ಅಪಘಾತಕ್ಕೆ ಒಳಗಾದ ವಾಹನಗಳ ಬಿದ್ದ ಬಿಡಿ ಭಾಗಳನ್ನು ಜಪ್ತಿ ಪಡಿಸಿಕೊಂಡಿಲ್ಲಾ. ಅಪಘಾತದಲ್ಲಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ ಪ್ರಯಾಣಿಕರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲಾ.

ನಾನು ಯಾವುದೇ ಗುನ್ನೆ ಸ್ಥಳಕ್ಕೆ ಹೋಗಿಲ್ಲ, ಗುನ್ನೆ ಪಂಚನಾಮೆ ಮಾಡಿಲ್ಲಾ ಎಂದರೆ ಸರಿಯಲ್ಲ. ಅಪಘಾತದ ವರ್ಷ ಅಫಜಲಪೂರ-ಕಲಬುರಗಿ ರಸ್ತೆ ಸರಿಯಾಗಿ ಇಲ್ಲದ ಕಾರಣ ದ್ವಿ-ಚಕ್ರ ವಾಹನ ಸವಾರನು ರಸ್ತೆ ಗುಂಡಿಯಲ್ಲಿ ತಾನಾಗೀಯೆ ಬಿದ್ದು ಗಾಯಗೊಂಡಿದ್ದರು ಸಹ ಬಸ್ಸಿನ ಚಾಲಕನ ವಿರುದ್ಧ ಸುಳ್ಳು ಪ್ರಕರಣದ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಗುನ್ನೆ ಸ್ಥಳದ ಪಂಚನಾಮೆ ಕಾಲಕ್ಕೆ ಸಾರ್ವಜನಿಕರು ಸೇರಿಲಿಲ್ಲಾ. ನಾವು ಚಾಸಾ-2 ಮತ್ತು 3 ರವರಿಗೆ ನೋಟಿಸ ಕೊಟ್ಟು ಕರೆಯಿಸಿರುತ್ತೇವೆ. ನಮ್ಮ ಠಾಣೆಯ ಎಲ್ಲಾ ಪ್ರಕರಣಗಳಲ್ಲಿ ಚಾಸಾ-2 ಮತ್ತು 3 ರವರನ್ನು ಗುನ್ನೆ ಸ್ಥಳದ ಪಂಚನಾಮೆ ಪಂಚರನ್ನಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಗುನ್ನೆ ಸ್ಥಳದ ಪಂಚನಾಮೆಯನ್ನು ಠಾಣೆಯಲ್ಲಿ ಕುಳಿತು ತಯ್ಯಾರಿಸಿ ಪಂಚರ ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-4 ರಿಂದ 10 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ.

.ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ